(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಬಾವಿಯಲ್ಲಿ ಧರಣಿ ಮಾಡಲು ಬಂದರು)

ಸಭಾಧ್ಯಕ್ಷರ ತೀರ್ಮ:

ಅ) ವಿಷಯ: ಮಾನ್ಯ ಸದಸ್ಯರಾದ ಶ್ರೀ. ದಿನೇಶ್ ಗುಂಡೂರಾವ್‌ರವರು "ಈಸಂಜೆ" ದಿನಪತ್ರಿಕೆಯ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ತೀರ್ಮ:

ಉಪಾಧ್ಯಕ್ಷರು: ಮಾನ್ಯ ಸದಸ್ಯರಾದ ಶ್ರೀ. ದಿನೇಶ್ ಗುಂಡೂರಾವ್ ಅವರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಾಮಾವಳಿಗಳ ನಿಯಮ 192ರ ಮೆರೆಗೆ ಸೂಚನೆಯನ್ನು ನೀಡಿ ದಿನಾಂಕ:04.07.2007ರ ಈ ಸಂಜೆ ದಿನಪತ್ರಿಕೆಯನ್ನು ಲಗತ್ತಿಸಿ ಅವರ ಹಾಗೂ ಅವರ ಕುಟುಂಬದ ಬಗ್ಗೆ ಇಲ್ಲಸಲ್ಲದ ಸತ್ಯಕ್ಕೆ ದೂರವಾದ ಸುದ್ದಿಗಳನ್ನು ಪ್ರಕಟಿಸಲಾಗಿದೆ ಹಾಗೂ ಈ ಸುದ್ದಿಯಿಂದ ಅವರ ಹಕ್ಕಿಗೆ ಚ್ಯುತಿಯಾಗಿದೆಯೆಂದು ತಿಳಿಸಿ, ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೋರಿರುತ್ತಾರೆ.

ಈ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದಾಗ ಮಾನ್ಯ ಸದಸ್ಯರುಗಳಾದ ಶ್ರೀ ದಿನೇಶ್ ಗುಂಡೂರಾವ್, ಶ್ರೀ ಕೆ.ಆರ್. ರಮೇಶ್ ಕುಮಾರ್, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಕೃಷ್ಣಬೈರೇಗೌಡ, ವಿರೋಧ ಪಕ್ಷದ ನಾಯಕರು, ಶ್ರೀ ಆರ್.ವಿ. ದೇಶಪಾಂಡೆ, ಹಾಗೂ ವಾಟಾಳ್ ನಾಗರಾಜ್ ಇವರುಗಳ ಚರ್ಚೆಯಲ್ಲಿ ಭಾಗವಹಿಸಿ ಈ ಸಂಜೆ ಪ್ರಕಟಣೆಯಿಂದ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿಯಾಗಿದೆಯೆಂದು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಲು ಒತ್ತಾಯಿಸಿರುತ್ತಾರೆ. ಸರಕಾರದ ವತಿಯಿಂದ ಮಾನ್ಯ ಕಂದಾಯ ಸಚಿವರು ಮಾತನಾಡಿ ಈ ಪ್ರಕರಣವು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ.

ಎರಡೂ ಕಡೆಯ ವಾದವನ್ನು ಪರಿಶೀಲಿಸಿರುತ್ತೇನೆ. ಈ ಸಂಜೆ ಪ್ರಕಟಣೆಯ ಪತ್ರಿಕೆಯಲ್ಲಿ [illegible]" ಪ್ರತಿಷ್ಟಿತ 288 ಪ್ರಭಾವಿ ವ್ಯಕ್ತಿಗಳು ಸೇರಿದಂತೆ 26 ಸಾವಿರ ಮಂದಿ ಸರ್ಕಾರಿ ಭೂಮಿ ಒತ್ತುವರಿ ಮಾಡಿರುವುದು ಬಯಲಾಗಿದೆ. ಬೆಂಗಳೂರು ನಗರ ಮತ್ತು ಹೊರವಲಯದಲ್ಲಿ ಕೊಟ್ಯಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಭೂಮಿ ಒತ್ತುವರಿ ಪತ್ತೆ ಹಚ್ಚಲು

ನೇಮಕಗೊಂಡಿರುವ ಎ.ಟಿ. ರಾಮಸ್ವಾಮಿ ನೇತೃತ್ವದ ವಿಧಾನ ಮಂಡಲದ ಜಂಟಿ ಸದನ ಸಮಿತಿ ಇದನ್ನು ಬಯಲಿಗೆಳೆದಿದೆಯೆಂದು ತಿಳಿಸಲಾಗಿದೆ." ವಿಧಾನ ಮಂಡಲದ ಜಂಟಿ ಸದನ ಸಮಿತಿಯ ಈವರೆಗೆ ಮಧ್ಯಂತರ ವರದಿಯನ್ನು ಮಾತ್ರ ಸದನಕ್ಕೆ ನೀಡಿದೆ. ಸದರಿ ವರದಿಯಲ್ಲಿ ಮೇಲಿನ ಅಂಶವು ಕಂಡು ಬರುವುದಿಲ್ಲ. ಆದುದರಿಂದ ಈ ಸಂಜೆ ಪತ್ರಿಕೆಯು ಸಮಿತಿಯ ನಡವಳಿಕೆಯನ್ನು ಪ್ರಕಟಿಸಿದಂತಾಗಿದೆ. Kaul and Shakdhar ಪುಟ ಸಂಖ್ಯೆ 282 ಮತ್ತು 283ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

"It is a breach of privilege and contempt of the house to publish any part of the proceedings or evidence given before, or any document presented to a parliamentary comittee before such proceedings or evidence or documents have been reported to the house."

The position was stated thus by the committee of privileges of LokSabha in the sundaryya case:

It is an accordance with the law and practice of the privilages of parliament that while a committee of Parliament is holding its sitting from day to day, its proceedings should not be published nor any documents or papers which may have presented to the Committee or the conclusions to which it may have arrived at referred to in the press... it is highly desirable that no person, including a member of parliament or press, should, without proper verification, make or publish a statement or comment about any matter which is under consideration or investigation by a committee of parliament."

Similarly, any publication of a draft or approved report of a parliamentary committee, before such report has been presented to the house, is treated as a breach of privilege of the house.

ಅದುದರಿಂದ ಈ ಸಂಜೆ ಪತ್ರಿಕೆಯ ಪ್ರಕಟಣೆಯ ಮೇಲೆ ತಿಳಿಸಿದ ವಿಷಯವನ್ನು ಪ್ರಕಟಿಸಿರುವುದರಿದ ಸಮಿತಿಯ ದಿನನತ್ಯದ ನಡವಳಿಕೆಯನ್ನು ಪ್ರಕಟಿಸಿದಂತಾಗಿರುತ್ತದೆ. ಅದುದರಿಂದ ಈ ವಿಷಯವನ್ನು ಪರಿಶೀಲನೆಗೆ ಹಾಗೂ ವರದಿಗಾಗಿ ಈ ಮೂಲಕ ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಲಾಗಿದೆ.